ಎನ್ನುವುದು ನಮ್ಮ ಗಮನಕ್ಕೆ ಬಂದಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇನ್ನೊಂದು ಉತ್ತರದಲ್ಲಿ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಯಾವುದೇ ಟೌನ್ ಪಂಚಾಯಿತಿಯಿಂದ ಆಗಲಿ, ಕೊಳಚೇ ಪ್ರದೇಶದ ನಿವಾಸಿಗಳಿಂದಾಗಲಿ ಯಾವುದೇ ಬೇಡಿಕೆ ಬಂದಿಲ್ಲ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಇದು ಸಂಪೂರ್ಣವಾಗಿ ತಪ್ಪು ಮಾಹಿತಿ ಎಂದು ನಾನು ಹೇಳಬಯಸುತ್ತೇನೆ. ನಾನು ಒಬ್ಬ ಶಾಸಕನಾಗಿ ಸಂಬಂಧಿಸಿದಂತಹ ಎಕ್ಸಿಕ್ಯೂಟೀವ್ ಇಂಜನೀಯರ್‌ರವರಿಗೆ ಬೀಳಗಿ ತಾಲ್ಲೂಕನ್ನು ಸ್ಲಂ ಬೋರ್ಡಿನಲ್ಲಿ ಅಳವಡಿಸಿಕೊಳ್ಳಬೇಕೆಂದು ನಾನು ಕೇಳಿಕೊಂಡಿದ್ದೆ. ಇದು ತಪ್ಪು ಮಾಹಿತಿ ಆದ್ದರಿಂದ ಈಗಲಾದರೂ ಮಾನ್ಯ ಮಂತ್ರಿಗಳು ಇದೇ ಸಾಲಿನಲ್ಲಿ ಈ ಬೀಳಗಿ ಪಟ್ಟಣವನ್ನು ತಮ್ಮ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನಲ್ಲಿ ಅಳವಡಿಸಿಕೊಂಡು ಕ್ರಮ ಕೈಗೊಳ್ಳುವರೇ ಎಂದು ನಾನು ಕೇಳುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ:-** ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಬೀಳಗಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿತ್ತು. ಈಗ 23-7-96ರಲ್ಲಿ ಇದನ್ನು ಪಟ್ಟಣ ಪಂಚಾಯತಿ ಆಗಿ ಪರಿವರ್ತನೆ ಮಾಡಿದ್ದಾರೆ. ಸರ್ಕಾರಿ ಆದೇಶದ ಹಿನ್ನಲೆಯಲ್ಲಿ ಮಂಡಲಿ ಅಧಿಕಾರಿಗಳಿಂದ ಕೊಳಚೆ ಪ್ರದೇಶಗಳ ಬಗ್ಗೆ ವರದಿ ತರಿಸಿ ಇದನ್ನು ಈ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಿದ್ದರೆ, ಆದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ವಿಷಯ:- ಕಬ್ಬನ್ ಉದ್ಯಾನವನದಲ್ಲಿ ಪ್ರತಿಭಟನೆ ನಿಷೇಧ.**

190 (2135) **ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಬ್ಬನ್ ಉದ್ಯಾನವನದಲ್ಲಿ ಪ್ರತಿಭಟನೆ, ಪ್ರದರ್ಶನ, ಧರಣಿ ನಡೆಸುವುದನ್ನು ನಿಷೇಧಿಸಬೇಕೆಂಬ ಉದ್ದೇಶ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ನಿಷೇಧ ಜಾರಿಗೆ ತರಲು ಕಾರಣಗಳೇನು?

**ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-**

ಅ) ಇತ್ತೀಚಿನ ಹೈಕೋರ್ಟಿನ ಮದ್ಯಾಂತರ ತೀರ್ಪಿನಲ್ಲಿ ರಾಜ್ಯ ಸರ್ಕಾರ ಮತ್ತು ಅದರ ಅಥಾರಿಟಿಗಳಿಗೆ ಮುಂದಿನ ಆದೇಶದವರೆಗೆ ಕಬ್ಬನ್ ಉದ್ಯಾನವನದಲ್ಲಿ ಯಾವುದೇ ಪ್ರತಿಭಟನೆ ಪ್ರದರ್ಶನ, ಧರಣಿ, ರ್‍ಯಾಲಿಗಳಿಗೆ ಅವಕಾಶ ನೀಡಬಾರದೆಂದು ಆದೇಶಿಸಲಾಗಿದೆ. ಈ ಆದೇಶವನ್ನು ಈಗ ಪರಿಶೀಲಿಸಲಾಗುತ್ತಿದೆ. ಹೈಕೋರ್ಟಿನ ಅಂತಿಮ ತೀರ್ಮಾನವನ್ನು ಕಾಯಲಾಗುತ್ತಿದೆ.

ಆ) ಹೈಕೋರ್ಟ್ ಆದೇಶದಂತೆ ನಿಷೇದವನ್ನು ಜಾರಿಗೆ ತರಲಾಗಿದೆ.

1) ಕಬ್ಬನ್ ಉದ್ಯಾನವನದ ವೈಭವತೆಯನ್ನು ಉಳಿಸಿ ಸಸ್ಯ ಸಂಪತ್ತನ್ನು ಸಂರಕ್ಷಿಸುವ ಸಲುವಾಗಿ.
2) ಉದ್ಯಾನವನದ ಲಾನ್, ಹೂಪಾತಿ, ಗುಲಾಬಿ ಮತ್ತು ಇತರೇ ಹೂವಿನ ತೋಟವನ್ನು ರಕ್ಷಿಸುವ ಸಲುವಾಗಿ.

3) ಪರಿಸರ ಮತ್ತು ಶಬ್ಧ ಮಾಲಿನ್ಯ ತಡೆಗಟ್ಟುವ ಸಲುವಾಗಿ.

4) ಇಲಾಖೆಯ ಆಸ್ತಿ ಪಾಸ್ತಿಗಳನ್ನು ರಕ್ಷಿಸಿ ಉದ್ಯಾನವನವನ್ನು ಸ್ವಚ್ಛತೆಯಿಂದ ಇಡುವ ಸಲುವಾಗಿ.

**ಶ್ರೀ ಎಸ್. ಸುರೇಶ್‌ಕುಮಾರ್ (ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರ ಪರವಾಗಿ):-** ಮಾನ್ಯ ಅಧ್ಯಕ್ಷರೇ, ಕಬ್ಬನ್ ಉದ್ಯಾನವನದಲ್ಲಿ ಪ್ರತಿಭಟನೆ ಪ್ರದರ್ಶನ ಧರಣಿ ರ್‍ಯಾಲಿಗಳಿಗೆ ಅವಕಾಶ ನೀಡಬಾರದೆಂದು ಇತ್ತೀಚಿನ ಹೈಕೋರ್ಟಿನ ಮಧ್ಯಂತರ ತೀರ್ಪಿನಲ್ಲಿ ಆದೇಶಿಸಲಾಗಿದೆ, ಈ ಆದೇಶವನ್ನು ಈಗ ಪರೀಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಕಬ್ಬನ್ ಪಾರ್ಕ್ ಉಳಿಸಿಕೊಳ್ಳುವುದಕ್ಕೋಸ್ಕರ ಈಗ ಏನು ಒಂದು ಕ್ರಮ ತೆಗೆದುಕೊಳ್ಳುತ್ತಿದ್ದೀರಾ, ಇದನ್ನು ಬೆಂಗಳೂರು ನಗರದ ನಾಗರೀಕರು ಸ್ವಾಗತಿಸುತ್ತಾರೆ. ಆದರೆ ಪ್ರತಿಭಟನೆ ಧರಣಿ ಪ್ರದರ್ಶನ, ಈ ಪ್ರಜಾಪ್ರಭುತ್ವದಲ್ಲಿ ಇದು ನಾಗರೀಕರ ಹಕ್ಕು. ವಿಶೇಷವಾಗಿ ಅಧಿಕಾರ ಕೇಂದ್ರವಾದ ವಿಧಾನಸೌಧದ ಹತ್ತಿರ ಬಂದು, ತಮ್ಮ ಅಹವಾಲನ್ನು ತಮ್ಮ ಅಳಲನ್ನು ತಿಳಿಸಬೇಕೆಂದು ಇಡೀ ರಾಜ್ಯದ ನಾಗರೀಕರು ಬಯಸುತ್ತಾರೆ. ನೀವು ಒಮ್ಮೆಲೇ ಇದನ್ನು ಇಲ್ಲಿ ನಿಷೇದಿಸಿದರೆ, ಈ ರೀತಿ ಪ್ರತಿಭಟನೆ ಮಾಡುವುದಕ್ಕೆ ವಿಧಾನಸೌಧದ ಹತ್ತಿರ ಸುತ್ತಮುತ್ತ ಇದಕ್ಕಾಗಿಯೇ ಯಾವುದಾದರೂ ಪರ್ಯಾಯ ಜಾಗವನ್ನು ಸೂಚಿಸುತ್ತೀರಾ? ಎರಡನೆಯದು ಕಬ್ಬನ್ ಉದ್ಯಾನವನ ಯಾರೋ ಹಿಂದೆ ಆ ಮಹಾತ್ಮ ಸುಮಾರು 60 ಎಕರೆಯೋ ಆಥವಾ ನೂರು ಎಕರೆಯೋ ಜಾಗವನ್ನು ಬಿಟ್ಟು ಹೋಗಿದ್ದಾನೆ. ಇದನ್ನು ಉಳಿಸಿ ಇದನ್ನು ಅಭಿವೃದ್ಧಿ ಮಾಡುವುದಕ್ಕೆ ತೋಟಗಾರಿಕೆ ಇಲಾಖೆಯಿಂದ ನೀವು ಇದುವರೆಗೂ ಏನೇನು ಕ್ರಮವನ್ನು ಕೈಗೊಂಡಿದ್ದೀರಿ? ಏಕೆಂದರೆ ಕಬ್ಬನ್ ಪಾರ್ಕ್‌ನನ್ನು ಬಹಳ ಚೆನ್ನಾಗಿ ರೂಪಿಸಿದ್ದಾರೆ. ಮಳೆ ನೀರು ಹರಿದು ಬಂದು ಅಲ್ಲಿ ಸಂಗ್ರಹ ಆಗಲಿಕ್ಕೆ ಹರಿದು ಹೋಗಲಿಕ್ಕೆ ಬಾಲಭವನದ ಹತ್ತಿರ ರೂಪಿಸಿದ್ದಾರೆ. ಆದರೆ ಇವತ್ತು ಅಲ್ಲೆಲ್ಲಾ ಕೂಡ ಎಲ್ಲರೂ ಬಂದು ಡಬ್ರೀಸ್ ತಂದು ಹಾಕುತ್ತಿರುವುದರಿಂದ ಇವತ್ತು ಮಳೆ ನೀರು ಅಲ್ಲಿ ಸಂಗ್ರಹಣೆ ಆಗುತ್ತಿಲ್ಲ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಬಹಳ ಮುಖ್ಯವಾಗಿ ಕಬ್ಬನ್‌ಪಾರ್ಕ್ ಒತ್ತುವರಿ ಆಗದ ಹಾಗೆ ಸರ್ಕಾರ ನಿಲ್ಲಿಸುತ್ತದೆಯೇ?

**ಶ್ರೀ ಡಿ.ಟಿ. ಜಯಕುಮಾರ್:-** ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಾಳಜಿ ಸರ್ಕಾರಕ್ಕೆ ಇದೆ. ಇಲ್ಲಿ ನಾವು ಈಗ ಎರಡು ರೀತಿಯ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಇದ್ದೇವೆ. ಒಂದು ಕಡೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಷ್ಕರ ಮತ್ತು ರ್‍ಯಾಲಿ ಪ್ರತಿಭಟನೆಗೆ ಅವಕಾಶ ಕೊಡುವುದು ಪ್ರಜಾಪ್ರಭುತ್ವದ ನೀತಿಯಾಗಿದ್ದರೂ ಕೂಡ ಅದಕ್ಕೆ ಕಬ್ಬನ್‌ಪಾರ್ಕ್‌ನಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ ಎಂಬ ಗಾದೆ ಇದೆ. ಹಾಗೆ ಎಲ್ಲಾ ಪಕ್ಷದವರೂ ಕೂಡ ತಮ್ಮ ಪ್ರತಿಭಟನೆಗಳನ್ನು ವ್ಯಕ್ತಪಡಿಸಲಿಕ್ಕೆ ಕಬ್ಬನ್‌ಪಾರ್ಕ್‌ನ್ನು ಕೇಳುತ್ತಾರೆ. ಅವರು ಮಾಡುವ ಮುಷ್ಕರ ಇರಬಹುದು, ಪ್ರತಿಭಟನೆ ಮೆರವಣಿಗೆ ಇರಬಹುದು, ಅದು ನಮ್ಮ ಜನತಾದಳದ ಪಕ್ಷದಿಂದ ಹಿಡಿದು ಬಿ.ಜೆ.ಪಿ. ಯಿಂದ ಹಿಡಿದು, ರೈತ ಸಂಘದಿಂದ ಹಿಡಿದು ಮತ್ತು ಯಾವುದೇ ಸಭೆ ಸಮಾರಂಭ ರ್‍ಯಾಲಿ ಆಗಬೇಕಾಗಿದ್ದರೂ ಸಹ ಅವರು ಕಬ್ಬನ್ ಪಾರ್ಕ್‌ನ್ನು ಕೇಳುತ್ತಾರೆ. ನಾನು ಈಗ ನಿಷ್ಪೂರಕ್ಕೂ ಕೂಡ

ಗುರಿ ಆಗಿದ್ದೇನೆ. ಇತ್ತೀಚೆಗೆ ನಮ್ಮ ಮುಸ್ಲಿಂ ಬಾಂಧವರು ಹಬ್ಬ ಆಚರಣೆ ಮಾಡಲು ಕಬ್ಬನ್‌ಪಾರ್ಕ್-ನಲ್ಲಿ ಜಾಗ ಕೇಳಿದ್ದರು. ಆಗ ನಾನು ಅದನ್ನು ಕೊಡಲಿಕ್ಕೆ ಬರುವುದಿಲ್ಲ ಎಂದು ಹೇಳಿ ರಿಜೆಕ್ಟ್ ಮಾಡಿ-ದ್ದೇನೆ, ಕೋರ್ಟಿನ ಒಂದು ಆದೇಶವನ್ನು ಸಹ ನಾನು ಕ್ವೋಟ್ ಮಾಡಿ ಕಳುಹಿಸಿದ್ದೇನೆ. ಅವರೆಲ್ಲರೂ ಆಗ ನನ್ನ ಮೇಲೆ ಕೋಪಿಸಿಕೊಂಡು ಹೋದರು. ಏಕೆ ಕೊಡುವುದಕ್ಕೆ ಬರುವುದಿಲ್ಲ ಅಂತ ಹೇಳಿ. ಜೊತೆಗೆ ಸಿನಿಮಾದವರು ಕೂಡ ಕಬ್ಬನ್‌ಪಾರ್ಕ್‌ನಲ್ಲಿ ಶೂಟಿಂಗ್ ತೆಗೆಯುವುದಕ್ಕೆ ಪರವಾನಿಗೆಯನ್ನು ಕೇಳುತ್ತಾರೆ. ಈ ರೀತಿ ಕೊಡುತ್ತಾ ಹೋದರೆ ಬೆಂಗಳೂರು ನಾಗರೀಕರು ಏನು ಕಬ್ಬನ್‌ಪಾರ್ಕ್ ರಕ್ಷಣೆ ಬಗ್ಗೆ ಕಾಳಜಿ ವಹಿಸಿದ್ದಾರೆ ಅದನ್ನು ಮಾಡುವುದಕ್ಕೆ ಬರುವುದಿಲ್ಲ. ಆ ದಿಸೆಯಿಂದ ಇವತ್ತು ಕೋರ್ಟಿನ ಮಧ್ಯಂತರ ಆದೇಶ ಇದೆ. ಯಾವುದೇ ರೀತಿಯ ಮುಷ್ಕರ ಮತ್ತು ಪ್ರತಿಭಟನೆ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು. ಮಾನ್ಯ ಸದಸ್ಯರು ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡ-ಬೇಕೆನ್ನುವ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಬಹುಶಃ ಅದಕ್ಕೆ ಬೇರೆ ಯೋಚನೆ ಮಾಡಬೇಕಾಗುತ್ತದೆ. ಈಗ ಸಣ್ಣಪುಟ್ಟ ಸಭೆಗಳಾದರೆ ಎಲ್ಲಿಯಾದರೂ ಮಾಡಬಹುದು, ಆದರೆ ದೊಡ್ಡ ದೊಡ್ಡ ರ್ಯಾಲಿಗಳನ್ನು ಮಾಡುವುದಕ್ಕೆ ಅವರು ಕಬ್ಬನ್‌ಪಾರ್ಕ್‌ನ್ನೇ ಅಪೇಕ್ಷೆಪಡುತ್ತಾರೆ. ಕಬ್ಬನ್‌ಪಾರ್ಕ್ ಕೊಟ್ಟರೆ ಅಲ್ಲಿರ-ತಕ್ಕಂಥ ಲಾನ್ ಅಲ್ಲಿರತಕ್ಕಂಥ ಮರಗಿಡಗಳು 10-15 ವರ್ಷದ ಗಿಡಗಳು ಇವೆ ಅವುಗಳ ಮೇಲೆ ಲಾರಿಗಳನ್ನು ತಂದು ಹತ್ತಿಸಿಬಿಡುತ್ತಾರೆ. ನಮಗೆ ಅದನ್ನು ನೋಡಿದರೆ ಕಣ್ಣೀರು ಬರುತ್ತದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ನಾವು ಕಬ್ಬನ್‌ಪಾರ್ಕ್‌ನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೋರ್ಟ್ ಆಜ್ಞೆ ಮಾಡಿರತಕ್ಕಂಥಾದ್ದನ್ನು ನಾವು ಸ್ವಾಗತ ಮಾಡಬೇಕು. ಮತ್ತು ಈ ವಿಚಾರದಲ್ಲಿ ಎಲ್ಲಾ ಪಕ್ಷದವರು ಸಹಕಾರ ನೀಡಬೇಕು. ದಯಮಾಡಿ ಕಬ್ಬನ್‌ಪಾರ್ಕ್ ಉಳಿಸಿಕೊಳ್ಳುವುದಕ್ಕೆ ಎಲ್ಲಾ ಪಕ್ಷದವರು ಮನಸ್ಸು ಮಾಡಬೇಕು. ತಾವೆಲ್ಲರೂ ಇದಕ್ಕೆ ಸಹಕಾರ ನೀಡಬೇಕು.

**ಶ್ರೀ ಎಸ್. ಸುರೇಶ್‌ಕುಮಾರ್:-** ಮಾನ್ಯ ಅಧ್ಯಕ್ಷರೇ, ನನ್ನ ಇನ್ನುಳಿದ ಎರಡು ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ. ಒತ್ತುವರಿ ಬಗ್ಗೆ ಮತ್ತು ರಕ್ಷಣೆ ಬಗ್ಗೆ ಇವತ್ತು ಕಬ್ಬನ್‌ಪಾರ್ಕ್‌ನಲ್ಲಿ ಏನೇನು ರಕ್ಷಣೆ ವ್ಯವಸ್ಥೆ ಇಲ್ಲ. ಯಾರು ಬೇಕಾದರೂ ತಂದು ಮಣ್ಣು ಹಾಕಬಹುದು. ಅದಕ್ಕೋಸ್ಕರ ಮಳೆ ನೀರು ಸಂಗ್ರಹಣೆ ಆಗುತ್ತಿಲ್ಲ, ಅದರ ಸುತ್ತಲೂ ಮಣ್ಣು ತುಂಬಿಕೊಂಡಿದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ?

**ಶ್ರೀ ಡಿ.ಟಿ. ಜಯಕುಮಾರ್:-** ಮಾನ್ಯ ಅಧ್ಯಕ್ಷರೇ, ಬೇರೆಯವರು ಯಾರೂ ಡಬ್ರೀಸ್ ತಂದು ಹಾಕುತ್ತಿಲ್ಲ. ನಾವು ಈಗಾಗಲೇ ನೋಟೀಸ್ ಕೊಟ್ಟಿದ್ದೇವೆ. ಹೈಕೋರ್ಟ್ ಬಿಲ್ಡಿಂಗ್ ಏನು ಇದೆ ಅದರ ರಿಪ್ಲಿಕ್ ಒಂದು ಬಿಲ್ಡಿಂಗ್‌ನ್ನು ಕಟ್ಟುತ್ತಿದ್ದಾರೆ. ಅವರು ಬಿಲ್ಡಿಂಗ್ ಕಟ್ಟುವಂತಹ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯವರು ಕೆಲವು ಡಬ್ರೀಸ್‌ನ್ನು ತಂದು ಹಾಕಿದ್ದುಂಟು. ಅದು ಸರ್ಕಾ-ರದ ಗಮನಕ್ಕೂ ಸಹ ಬಂತು, ಮತ್ತು ಘನವೆತ್ತ ರಾಜ್ಯಪಾಲರು ಸಹ ನಮ್ಮನ್ನು ಕರೆಸಿ ಈ ರೀತಿ ಅನ್ಯಾಯವಾಗುತ್ತಿದೆ ನೋಡಿ ಎಂದು ನಮಗೆ ಹೇಳಿದ ಮೇಲೆ ನಾವು ಬಂದು ನೋಡಿದ ಮೇಲೆ ಡಬ್ರೀಸ್ ಇತ್ತು. ನಾವು ಈಗ ಅದನ್ನೆಲ್ಲಾ ತೆಗೆಸಿಹಾಕಿದ್ದೇವೆ. ಬೇರೆಯವರು ಯಾರೂ ಕೂಡ

ಡಬ್ರೀಸ್‌ನ್ನು ತಂದು ಅಲ್ಲಿ ಹಾಕುವುದಕ್ಕೆ ಅವಕಾಶ ಇಲ್ಲ. ಅಕಸ್ಮಾತ್ ತಂದು ಹಾಕಿದ್ದರೆ ಅವರ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಅಲ್ಲಿ ಲಾಲ್‌ಬಾಗ್ ಟ್ರಸ್ಟ್ ಎನ್ನುವಂತಹ ಸಂಸ್ಥೆ ಸಹ ಇದೆ. ಕಬ್ಬನ್‌ಪಾರ್ಕ್‌ಗೆ ಮತ್ತು ಲಾಲ್‌ಬಾಗ್‌ಗೆ ಎರಡಕ್ಕೂ ಒಂದು ಟ್ರಸ್ಟ್ ಇದೆ. ಆ ಟ್ರಸ್ಟ್‌ನಲ್ಲಿ ಕಾರ್ಪೊರೇಷನ್ ಕಮೀಷನರ್, ಪೋಲೀಸ್ ಕಮೀಷನರ್ ಮತ್ತು ನಮ್ಮ ಇಲಾಖಾಧಿಕಾರಿಗಳು ಎಲ್ಲರೂ ಸಹ ಅದರಲ್ಲಿ ಸದಸ್ಯರಾಗಿದ್ದಾರೆ. ನಾವು 3-4 ಮೀಟಿಂಗ್‌ಗಳನ್ನು ಸಹ ಮಾಡಿದ್ದೇವೆ. ಅಲ್ಲಿ ಒಂದು ಸೂಚನೆ ಬಂತು. ಅದು ಏನೆಂದರೆ ವಾಹನಗಳನ್ನು ಕಬ್ಬನ್‌ಪಾರ್ಕ್‌ನಲ್ಲಿ ಬಿಡಬಾರದು ಎಂದು. ಆದರೆ ಆಗ ಕೆಲವರು ಹೇಳಿದರು ಟ್ರಾಫಿಕ್ ಬಂದ್ ಆಗುತ್ತದೆ, ಆದ್ದರಿಂದ ನೀವು ವಾಹನಗಳನ್ನು ಬಿಡಬೇಕಾಗುತ್ತದೆ ನೀವು ಆದಷ್ಟು ತಂತಿಬೇಲಿಯನ್ನೊ ಅಥವಾ ಬಯ್ಯೋ ಬೇಲಿಯನ್ನೊ ನಿರ್ಮಾಣ ಮಾಡಿ ರಕ್ಷಣೆ ಮಾಡಿ ಎಂದು ಸಲಹೆ ಬಂದಿದೆ. ಹೆಚ್ಚು ದುಡ್ಡು ಖರ್ಚಾಗುತ್ತದೆ. ಎಷ್ಟೇ ದುಡ್ಡು ಖರ್ಚಾದರೂ ಸರಿಯೇ, ಅದರ ಬಗ್ಗೆ ಚಿಂತೆ ಇಲ್ಲ. ಸರ್ಕಾರ ಇದರ ಬಗ್ಗೆ ಗಮನಹರಿಸಿ ಕಬ್ಬನ್-ಪಾರ್ಕ್‌ನ್ನು ರಕ್ಷಣೆ ಮಾಡುವುದಕ್ಕೆ ಎಲ್ಲಾ ರೀತಿಯ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಅಧ್ಯಕ್ಷರೇ, ಕಬ್ಬನ್‌ಪಾರ್ಕ್‌ನ್ನು ರಕ್ಷಣೆ ಮಾಡುವುದಕ್ಕೆ ನಮ್ಮದೇನೂ ವಿರೋಧ ಇಲ್ಲ. ಅವರು ಆಡಳಿತ ಪಕ್ಷದಲ್ಲಿರುವವರು, ನಾವು ವಿರೋಧ ಪಕ್ಷದಲ್ಲಿರುವವರು. ಸಭೆ, ಸಮಾರಂಭಗಳಿಗೆ ಧರಣಿ ಪ್ರತಿಭಟನೆಗಳಿಗೆ ನಮಗೆ ಜಾಗ ಬೇಕು. ದೇಶದ ಯಾವುದೇ ರಾಜ್ಯದ ರಾಜಧಾನಿಯಲ್ಲಿ ಇಂಥಾದ್ದಕ್ಕೆ ಒಂದು ಅವಕಾಶ ಇದೆ. ತಾವು ಅದಕ್ಕೆ ಒಂದು ಪರ್ಯಾಯ ವ್ಯವಸ್ಥೆ ಮಾಡಿ. ಪ್ಯಾಲೇಸ್ ಗ್ರೌಂಡ್ ಇತ್ತು, ಅದನ್ನು ವಶಪಡಿಸಿಕೊಳ್ಳಬಹುದಿತ್ತು. ಇಂತಹ ಎಲ್ಲ ಕಾರ್ಯಕ್ರಮಗಳಿಗೆ ಅದು ಉಪಯೋಗವಾಗುತ್ತಿತ್ತು. ಒಂದಲ್ಲ ಒಂದು ರೀತಿಯಲ್ಲಿ ಬೇರೆ ರೀತಿಯಲ್ಲಿ ಬೇರೆಯವರಿಗೆ ಹೆಲ್ಪ್ ಮಾಡಿ ಕೈಬಿಟ್ಟು ಹೋಗುವಂತಹ ಪರಿಸ್ಥಿತಿ ಬಂದಿದೆ, ಸರ್ಕಾರ ಅದನ್ನು ವಶಪಡಿಸಿಕೊಳ್ಳಲಿಲ್ಲ. ಕಬ್ಬನ್‌ಪಾರ್ಕ್‌ನಲ್ಲಿ ತಾವು ಬೇರೆ ಪರ್ಯಾಯ ವ್ಯವಸ್ಥೆ ಮಾಡುವವರಿಗೆ ಒಂದು ಬೌಂಡ್ರಿಯನ್ನು ಫಿಕ್ಸ್ ಮಾಡಿ. ಇಲ್ಲದಿದ್ದರೆ ಎಲ್ಲಿ ಧರಣಿ ಸತ್ಯಾಗ್ರಹ ಮಾಡಬೇಕು? ನಾಳೆ ಒಂದು ಲಕ್ಷ ಜನ ಬರುತ್ತಾರೆ. ಇವತ್ತು ಮುಖ್ಯಮಂತ್ರಿಗಳು ಬೇರೆ ಬೇರೆ ಸಭೆ ಸಮಾರಂಭಗಳಿಗೆ ವಿಧಾನಸೌಧದ ಮುಂಭಾಗದಲ್ಲಿ ಜಾಗ ಕೊಡುತ್ತೇವೆಂದು ಹೇಳುವಂತಹ ಸಂದರ್ಭದಲ್ಲಿ ನಮಗೆ ಪರ್ಯಾಯ ವ್ಯವಸ್ಥೆ ಮಾಡಿ, ಇಲ್ಲದಿದ್ದರೆ ಅದೇ ದೊಡ್ಡ ಇಶ್ಯು ಆಗುತ್ತದೆ, ದೊಡ್ಡ ಹೋರಾಟ ಮತ್ತೆ ಇನ್ನೊಂದು ರೂಪದಲ್ಲಿ ಆಗುವುದಕ್ಕೆ ತಾವೇ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಇವತ್ತು ಪಕ್ಕದಲ್ಲಿ ಕ್ರಿಕೆಟ್ ಸ್ಟೇಡಿಯಂಗೆ ಸರ್ಕಾರದ ಜಾಗ ಬಿಟ್ಟುಕೊಟ್ಟಿದ್ದೀರಾ. ಇವತ್ತು ನೀವು ಇಂತಹ ಸಭೆ ಸಮಾರಂಭಗಳಿಗೆ ಪರ್ಯಾಯ ವ್ಯವಸ್ಥೆ ಮಾಡದೇ ಇದ್ದರೆ ಹೇಗೆ? ಪ್ರತಿಭಟನಾ ಕಾರ್ಯಕ್ರಮಗಳು ನಿಂತು ಹೋಗುತ್ತಿದೆಯೇ? ನೀವು ಅಧಿಕಾರಕ್ಕೆ ಬಂದ ಮೇಲೆ ಹೋರಾಟದ ಪ್ರಶ್ನೆಯೇ ಇಲ್ಲ ಯಡಿಯೂರಪ್ಪನವರೇ ನಮ್ಮ ರಾಜ್ಯದಲ್ಲಿ ಹಾಲಿನ ಹೊಳೆ ಹರಿಯುತ್ತಿದೆ ಅಂದ್ರೆ ಸರಿ ಇದೆ. ಹೋರಾಟಕ್ಕೆ ಜಾಗ ಬೇಕಲ್ಲ. ಪರ್ಯಾಯ ವ್ಯವಸ್ಥೆ ಮಾಡುವುದಕ್ಕಿಂತ ಮುಂಚೆ ಅದರಲ್ಲಿ

ನೀವು ಒಂದು ಭಾಗವನ್ನು ಆದಕ್ಕಾಗಿಯೇ ಮೀಸಲಿಡಲೇಬೇಕು. ಇಲ್ಲದಿದ್ದರೆ ತುಂಬ ಕಷ್ಟವಾಗುತ್ತದೆ.

**ಶ್ರೀ ಡಿ.ಟಿ. ಜಯಕುಮಾರ್:-** ಮಾನ್ಯ ಅಧ್ಯಕ್ಷರೇ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇದಕ್ಕೆ ಕೊಡಬೇಕಾದ ಅವಶ್ಯಕತೆ ಇದೆ. ಅವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯನ್ನು ಪರಿಶೀಲಿಸಲಾಗುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಮಾನ್ಯ ಅಧ್ಯಕ್ಷರೇ ನಾವು ಇಲ್ಲಿ ಪ್ರತಿ ಪಕ್ಷದಲ್ಲಿ ಕುಳಿತು ಸ್ಪಷ್ಟಮಾಡುತ್ತೇವೆ. ನೀವು ಸಭೆ ಸಮಾರಂಭಗಳಿಗೆ ಪ್ರತಿಭಟನೆ ಧರಣಿಗಳಿಗೆ ಲಕ್ಷಾಂತರ ಜನ ಬರುತ್ತಾರೆ ಅವರಿಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡದೇ ಅಲ್ಲಿ ನಾಗರೀಕರು ವಾಕ್ ಮಾಡುವುದಕ್ಕೆ ಬೇರೆ ವ್ಯವಸ್ಥೆ ಮಾಡಿ ನಮ್ಮದೇನೂ ವಿರೋಧ ಇಲ್ಲ. ತಾವು ಒಂದು ಪರ್ಯಾಯ ವ್ಯವಸ್ಥೆ ಮಾಡಿ ಆಮೇಲೆ ನೀವು ಅಲ್ಲಿ ಯಾರೂ ಬರಬೇಡಿ ಎಂದು ಹೇಳಿ ಆದಕ್ಕೆ ನಾವು ನಮ್ಮ ಸಂಪೂರ್ಣ ಸಹಕಾರ ಕೊಡುತ್ತೇವೆ. ಇಲ್ಲದೇ ಹೋದರೆ ಆದೇ ಒಂದು ದೊಡ್ಡ ಹೋರಾಟ ಆಗುತ್ತದೆ. ನಾವು ಪ್ರತಿಭಟನೆ ಮಾಡುತ್ತೇವೆ ನೀವು ಜೈಲು ತುಂಬಿಸಿ.

**ಶ್ರೀ ಡಿ.ಟಿ. ಜಯಕುಮಾರ್:-** ಸಣ್ಣಪುಟ್ಟ ಸಭೆಗಳಾದರೆ ಅಲ್ಲಿ ಅವಕಾಶ ಕೊಡಬಹುದು ಈ ಗೋಪಾಲಗೌಡ ಸರ್ಕಲ್‌ಗೆ ಲಕ್ಷಾಂತರ ಜನ ಬಂದರೆ ಕಷ್ಟವಾಗುತ್ತದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ:-** ನಾಳೆ ಒಂದು 50 ಸಾವಿರ ಜನ ಬಂದರು ಎಂದು ಇಟ್ಟು-ಕೊಳ್ಳಿ ಆಗ ನಾವು ಎಲ್ಲಿ ಸಭೆ ಮಾಡಬೇಕು?

**ಶ್ರೀ ಡಿ.ಟಿ. ಜಯಕುಮಾರ್:-** ನೀವೇ ಪ್ರಶ್ನೆ ಹಾಕುತ್ತೀರಿ ಕಬ್ಬನ್‌ಪಾರ್ಕ್ ಉಳಿಸಿ ಎಂದು. ಆದರೆ ರಕ್ಷಣೆ ಕೊಡುವುದಿಲ್ಲ ಅಂದರೆ ಹೇಗೆ?

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಈಗಲೂ ಹೇಳುತ್ತೇನೆ ಕಬ್ಬನ್‌ಪಾರ್ಕ್ ಉಳಿಸಬೇಕೆಂದು. ಪರ್ಯಾಯ ವ್ಯವಸ್ಥೆ ಮಾಡುವವರೆಗೆ ಕಬ್ಬನ್‌ಪಾರ್ಕ್‌ನಲ್ಲಿ ಒಂದು ಪೋರ್ಶನ್ ಅದಕ್ಕೆ ಇಡಿ. ಇಲ್ಲ-ದಿದ್ದರೆ ಪರ್ಯಾಯ ವ್ಯವಸ್ಥೆ ಮಾಡಿಕೊಡಿ ನಾವು ಸಂಪೂರ್ಣ ಸಹಕಾರ ಕೊಡುತ್ತೇವೆ.

**ಶ್ರೀ ಡಿ.ಟಿ. ಜಯಕುಮಾರ್:-** ಒಂದು ಲಕ್ಷ ಜನ ಬಂದರೆ ಕಬ್ಬನ್‌ಪಾರ್ಕ್ ಹಿಡಿಸುವುದಿಲ್ಲ. ಪರ್ಯಾಯ ವ್ಯವಸ್ಥೆ ಅಲ್ಲಿ ಎಲ್ಲಿ ಸಾಧ್ಯವಾಗುತ್ತದೆ?

**ಶ್ರೀ ಬಿ.ಎಸ್. ಯಡಿಯೂರಪ್ಪ:-** ರೇಸ್ ಕೋರ್ಸನ್ನು ಶಿಫ್ಟ್ ಮಾಡಿ ಅನೇಕ ವರ್ಷಗಳಿಂದ ನಾವು ಕೇಳುತ್ತಿದ್ದೇವೆ.

**ಶ್ರೀ ಡಿ.ಟಿ. ಜಯಕುಮಾರ್:-** ಸರ್ಕಾರ ಅದನ್ನು ಪರಿಶೀಲಿಸುತ್ತದೆ.

**ಶ್ರೀ ಎಸ್.ಎಸ್. ಪಾಟೀಲ್:-** ಸಭೆ ಸಮಾರಂಭಗಳಿಗೆ ಅವಕಾಶ ಕೊಡುವುದನ್ನು ಒಪ್ಪ-ಬಹುದು, ಸತ್ಯಾಗ್ರಹಕ್ಕೆ ಪ್ರೋತ್ಸಾಹ ಕೊಡಬೇಕೇ?

**ಶ್ರೀ ಬಿ.ಎಸ್. ಯಡಿಯೂರಪ್ಪ:-** ಈ ತರಹ ಸರ್ಕಾರ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ನಾವು ಸತ್ಯಾಗ್ರಹ ಮಾಡಲೇಬೇಕಾಗುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸತ್ಯಾಗ್ರಹ ಮಾಡಬೇಕಾಗುತ್ತದೆ. ಇಲ್ಲೇ ಸತ್ಯಾಗ್ರಹ ಮಾಡುವುದಕ್ಕೆ ಈ ವೆಲ್‌ನ್ನೂ ಜಾಸ್ತಿ ಮಾಡಬೇಕು.

**ಅಧ್ಯಕ್ಷರು:-** ನಾನು ಏನಾದರೂ ಮಾಡಿ ಜಾಗವನ್ನು ಹೊರಗಡೆ ಕೊಡಿಸುತ್ತೇನೆ, ಇಲ್ಲಿ ಮಾತ್ರ ಮಾಡಬೇಡಿ.

**ಶ್ರೀ ವಾಟಾಳ್ ನಾಗರಾಜ್:-** ಮಾನ್ಯ ಅಧ್ಯಕ್ಷರೆ, ಕಬ್ಬನ್ ಪಾರ್ಕ್‌ನಲ್ಲಿ ಸತ್ಯಾಗ್ರಹಕ್ಕೆ ಮತ್ತು ಪ್ರತಿಭಟನೆಗೆ ಅವಕಾಶ ಕೊಡಬಾರದೆಂದು ಸರ್ಕಾರದ ಮನಸ್ಸಿನಲ್ಲಿ ಯಾವಾಗ ಬಂತು? ಇಲ್ಲಿ ಕೊಡಬೇಕು, ಇಲ್ಲಿ ಕೊಡಬಾರದೆಂಬ ಬುದ್ಧಿ ಸರ್ಕಾರಕ್ಕೆ ಬಂದದ್ದು ಯಾವಾಗ? ನಿಮಗೆ ಬುದ್ಧಿ ಬಂತೋ? ಅಥವಾ ಯಾರಾದರೂ ನಿಮಗೆ ಬುದ್ಧಿ ಹೇಳಿದರೋ ಕೊಡಬೇಡಿ ಎಂದು.

**ಶ್ರೀ ಡಿ.ಟಿ. ಜಯಕುಮಾರ್:-** ಕೋರ್ಟಿನಿಂದ ಆರ್ಡರ್ ಬಂದಿದೆ.

**ಶ್ರೀ ವಾಟಾಳ್ ನಾಗರಾಜ್:-** ಇದು ನ್ಯಾಯಲಯದ ಆರ್ಡರ್? ಹಾಗಾದರೆ ಈ ಯೋಚನೆ ಸರ್ಕಾರಕ್ಕೆ ಇರಲಿಲ್ಲ ಎಂದ ಹಾಗಾಯಿತು. ಈ ಸ್ಥಳವನ್ನು ಪ್ರತಿಭಟನೆ ಮಾಡುವವರಿಗೆ ಕೊಡಬಾರದೆಂದು ನ್ಯಾಯಾಲಯದವರು ಆರಾಮವಾಗಿ ಕುಳಿತುಕೊಂಡು ಹೇಳಿಬಿಡುತ್ತಾರೆ. ಅವರ ಬಗ್ಗೆ ನನಗೆ ಗೌರವ ಇದೆ. ಆದರೆ ನಮ್ಮ ಹಣೆಬರಹ ಏನು? ನಾವು ಹಗಲು ರಾತ್ರಿ ಓಡುವವರು, ಚಳುವಳಿ ಮಾಡುವವರು, ಮೆರವಣಿಗೆ ತೆಗೆಯುವರು, ಕೂಗಾಡುವವರು, ಅಲ್ಲಿ ಜಾಗ ನಮಗೆ ಕೊಡುವುದಿಲ್ಲವೆಂದರೆ ನಾವು ಎಲ್ಲಿಗೆ ಹೋಗಬೇಕು? ಕಬ್ಬನ್‌ಪಾರ್ಕ್‌ನ್ನು ಉಳಿಸಬೇಕೆಂದು ಸಾರ್ವತ್ರಿಕ ಅಭಿಪ್ರಾಯ, ಅದನ್ನು ನಾವು ಒಪ್ಪುತ್ತೇವೆ. ಆದರೆ ಸತ್ಯಾಗ್ರಹಕ್ಕೆ ಮಾತ್ರ ಕಬ್ಬನ್‌ಪಾರ್ಕ್‌ನ ಒಂದು ಮೂಲೆಯಲ್ಲಿ ಜಾಗವನ್ನು ಕೊಡಲೇಬೇಕಾಗುತ್ತದೆ. ಅಲ್ಲಿ ಸ್ಥಳ ಕೊಡುವುದಿಲ್ಲ ಎಂದಾದರೆ ವಿಧಾನಸೌಧದಲ್ಲೇ ನಮಗೆ ಜಾಗ ಕೊಡಿ ನಮ್ಮದೇನು ಅಭ್ಯಂತರವಿಲ್ಲ. ಎರಡರಲ್ಲಿ ಒಂದು ಮಾಡಬೇಕು.

**ಶ್ರೀ ಬಿ. ಮುನಿಯಪ್ಪ:-** ಮಾನ್ಯ ಅಧ್ಯಕ್ಷರೆ, ಕಬ್ಬನ್‌ಪಾರ್ಕ್‌ನ್ನು ರಕ್ಷಣೆ ಮಾಡುವ ಬಗ್ಗೆ ಮಂತ್ರಿಗಳಿಗೆ ಏನು ಕಾಳಜಿ ಇದೆಯೋ ಅದನ್ನು ನಾನು ಸ್ವಾಗತ ಮಾಡುತ್ತೇನೆ. ರಾಜ್ಯದಲ್ಲಿರತಕ್ಕಂಥ ಜನರುಗಳಿಗೆ ಅನ್ಯಾಯವಾದಾಗ ಅದನ್ನು ಪ್ರತಿಭಟನೆ ಮಾಡಲು ನಗರಕ್ಕೆ ಬಂದಾಗ ಅವರಿಗೆ ಒಂದು ಸ್ಥಳ ಬೇಕಾಗುತ್ತದೆ. ಲಕ್ಷಾಂತರ ಜನ ಬಂದು ಸೇರುತ್ತಾರೆ ಎನ್ನುವ ರ್‍ಯಾಲಿಗಳಿಗೆ ಅವಕಾಶ ಕೊಡುವುದು ಬೇಡ, 50-100-200 ಜನ ಬಂದು ಅಲ್ಲಿ ಪ್ರತಿಭಟನೆ ಮಾಡುವುದಕ್ಕೆ ಖಂಡಿತ ಅವಕಾಶ ಕಲ್ಪಿಸಿಕೊಡಬೇಕಾಗುತ್ತದೆ. ಕಾರಣವೇನೆಂದರೆ, ಸರ್ಕಾರದ ಗಮನ ಸೆಳೆಯುವುದಕ್ಕೆ ರಾಜಮಹಲ್ ವಿಲಾಸ್ ಗ್ರೌಂಡ್‌ನಲ್ಲೋ, ಜಕ್ಕರಾಯನ ಕೆರೆ ಅಂಗಳದಲ್ಲೋ ಪ್ರತಿಭಟನೆ ಮಾಡಿದರೆ ಆಗುವುದಿಲ್ಲ. ಕಬ್ಬನ್‌ಪಾರ್ಕ್ ವಿಷಯದಲ್ಲಿ ಇನ್ನೊಂದು ಹೇಳಬೇಕಾದರೆ, ಬೆಳಿಗ್ಗೆ ಹೊತ್ತು ವಾಕಿಂಗ್ ಮಾಡಲು ವಯಸ್ಸು ಆದವರು ಮತ್ತು ಮಕ್ಕಳೆಲ್ಲಾ ಬಂದಿರುತ್ತಾರೆ. ಅಲ್ಲಿ ಮೆಟಾಡೋರ್‌ಗಳು, ಆಟೋ ರಿಕ್ಷಾಗಳು ಮೈ ಮೇಲೆ ಬರುವ ಹಾಗೆ ಓಡಾಡುತ್ತಿರುತ್ತವೆ. ಆದುದರಿಂದ, ಬೆಳಿಗ್ಗೆ 8 ಗಂಟೆಯವರೆಗಾದರೂ

ಯಾವ ವಾಹನಗಳೂ ಕಬ್ಬನ್ ಪಾರ್ಕ್ ಒಳಗೆ ಬರದ ಹಾಗೆ ಆಜ್ಞೆ ಮಾಡಬೇಕು. ಇನ್ನೊಂದು ವಿಷಯವೆಂದರೆ, ಕೆಲವರು ಕಬ್ಬನ್ ಪಾರ್ಕ್‌ಗೆ ನಾಯಿಗಳನ್ನು ಕರೆದುಕೊಂಡು ಬರುತ್ತಾರೆ, ಕಾನೂನು ಪ್ರಕಾರ ನಾಯಿಗಳನ್ನು ಕರೆದುಕೊಂಡು ಬರಬಾರದು. ಮೊನ್ನೆ ದಿವಸ ಫೌಂಟೇನ್ ಹತ್ತಿರ ಒಂದು ನಾಯಿ ಸಣ್ಣ ಮಗುವನ್ನು ಅಟ್ಟಿಸಿಕೊಂಡು ಹೋಗುತ್ತಿತ್ತು. ಆಮೇಲೆ ನಾನು ಹೋಗಿ ಆ ಮಗುವನ್ನು ಕಾಪಾಡಿದೆ. ಆದುದರಿಂದ ಕಬ್ಬನ್‌ಪಾರ್ಕ್‌ನಲ್ಲಿ ಈ ತರಹ ನಾಯಿಗಳು ಮತ್ತು ಇತರ ಪ್ರಾಣಿಗಳು ಬರದ ಹಾಗೆ ತಡೆಗಟ್ಟಬೇಕು. ಕಬ್ಬನ್‌ಪಾರ್ಕ್‌ನಲ್ಲಿ 40-50 ವರ್ಷಗಳ ಹಿಂದೆ ಬೆಳೆಸಿದ್ದ ಮರಗಳೆಲ್ಲಾ ಬಿದ್ದು ಹೋಗಿವೆ. ಅದರ ಪ್ರತಿಯಾಗಿ ಹೊಸ ಗಿಡಗಳನ್ನು ಹಾಕದಿದ್ದರೆ ಮುಂದಿನ ದಿವಸಗಳಲ್ಲಿ ಕಬ್ಬನ್ ಪಾರ್ಕ್ ಬೋಳಾಗುತ್ತದೆ. ಈ ಬಗ್ಗೆ ಖುದ್ದಾಗಿ ಮಾನ್ಯ ಮಂತ್ರಿಗಳು ಕಬ್ಬನ್‌ಪಾರ್ಕ್‌ಗೆ ಭೇಟಿಕೊಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:-** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್-ರವರು ಹೇಳಿದ ಹಾಗೆ ಸತ್ಯಾಗ್ರಹಕ್ಕೆ ಮತ್ತು ಹೋರಾಟ ಮಾಡುವವರಿಗೆ ಕಬ್ಬನ್‌ಪಾರ್ಕ್‌ನಲ್ಲಿ ಸ್ವಲ್ಪ ಜಾಗವನ್ನು ಬಿಟ್ಟುಕೊಡಬೇಕು. ಕಬ್ಬನ್ ಪಾರ್ಕ್ ಉಳಿಸಬೇಕು ಎಂಬುದರಲ್ಲಿ ಬೇರೆ ಮಾತಿಲ್ಲ. ಆದರೆ ದೊಡ್ಡ ಬಹಿರಂಗ ಸಭೆ ಮಾಡುವುದಕ್ಕೆ ಬೇರೆ ಒಂದು ಉತ್ತಮ ಜಾಗವನ್ನು ಸರ್ಕಾರ ತ್ವರಿತವಾಗಿ ತೋರಿಸಬೇಕಾಗುತ್ತದೆ. ಇಲ್ಲದಿದ್ದರೆ, ಈ ಕಬ್ಬನ್‌ಪಾರ್ಕ್‌ನಲ್ಲಿ ಸತ್ಯಾಗ್ರಹ ಮಾಡುವುದಕ್ಕೆ ಜಾಗ ಕೊಡ-ಬೇಕೆಂದು ನಾವು ಇಲ್ಲೇ ಸತ್ಯಾಗ್ರಹ ಮಾಡಬೇಕಾದ ಪರಿಸ್ಥಿತಿ ಬರುತ್ತದೆ.

**ಶ್ರೀ ಡಿ.ಟಿ. ಜಯಕುಮಾರ್:-** ಮಾನ್ಯ ಅಧ್ಯಕ್ಷರೆ, ಕಬ್ಬನ್‌ಪಾರ್ಕ್‌ನಲ್ಲಿ ಸತ್ಯಾಗ್ರಹಕ್ಕೆ ಜಾಗ ಕೊಡಬಾರದೆನ್ನುವ ಬಗ್ಗೆ ಸರ್ಕಾರಕ್ಕೆ ಈಗ ಬುದ್ಧಿ ಬಂತೇ, ಮೊದಲು ಬುದ್ಧಿ ಬರಲಿಲ್ಲವಲ್ಲ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದ್ದಾರೆ. ಕಬ್ಬನ್‌ಪಾರ್ಕ್‌ನ್ನು ರಕ್ಷಣೆ ಮಾಡುವ ಬಗ್ಗೆ ಸರ್ಕಾರಕ್ಕೆ ಮೊದಲಿನಿಂದಲೂ ಕಾಳಜಿ ಇತ್ತು. ಇದರ ಬಗ್ಗೆ ಮಾಲಿನಿ ಎಸ್. ಎಂಬ ಒಬ್ಬರು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್‌ಪಿಟಿಷನ್ ಹಾಕಿದ್ದ ಪ್ರಯುಕ್ತ ಹೈಕೋರ್ಟ್ ಒಂದು ಮಧ್ಯಂತರ ಆದೇಶ-ವನ್ನು ನೀಡಿದೆ. ಬಹುಶಃ 14ನೇ ತಾರೀಖು ಪೂರ್ಣ ಪ್ರಮಾಣದ ತೀರ್ಪು ಹೊರಬರುತ್ತದೆ. ಬಹುಶಃ ಅದನ್ನು ನಿಷೇಧ ಮಾಡಲಿಕ್ಕೇ ಕೊಡುತ್ತಾರೆ. ಆ ರೀತಿ ನಿಷೇಧ ಆಜ್ಞೆ ಬಂದರೆ ಈಗ ಮಾನ್ಯ ಸದಸ್ಯರು ಹೇಳಿರುವ ವಿಷಯವನ್ನು ಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಸಣ್ಣ ಪುಟ್ಟ ಸತ್ಯಾಗ್ರಹ ಅಂದರೆ 150-200 ಜನರು ಪ್ರತಿಭಟನೆಯನ್ನು ಗೋಪಾಲಗೌಡ ವೃತ್ತದ ಹತ್ತಿರ ಮಾಡಬಹುದು. ಮತ್ತೆ ನಾಯಿಗಳನ್ನು ಕರೆದುಕೊಂಡು ಬರುತ್ತಾ-ರೆಂದು ಹೇಳಿದರು. ಅದರ ಬಗ್ಗೆ ಗಮನ ಹರಿಸಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು:-** 150 ಜನರ ಮೇಲೆ ಹೋರಾಟ ಮಾಡಬಾರದೆಂದು ಇನ್‌ಸ್ಟ್ರಕ್ಷನ್ ಕೊಡುವು-ದಕ್ಕಾಗುತ್ತದೆಯಾ? ಇದು ಬಹಳ ಗಂಭೀರವಾದ ವಿಚಾರ. ಕೋರ್ಟ್‌ನಿಂದ ಏನು ಆದೇಶ ಬರುತ್ತದೆಯೋ ಬರಲಿ. ಇದರ ಬಗ್ಗೆ ತಾವು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ. ಪ್ರಜಾಪ್ರಭುತ್ವ

ವ್ಯವಸ್ಥೆಯಲ್ಲಿ ಇದಕ್ಕೆಲ್ಲಾ ಅವಕಾಶ ಇರಬೇಕು. ತಾವು ಇವತ್ತು ಇಲ್ಲಿ ಇದ್ದೀರಿ, ನಾಳೆ ದಿವಸ ನೀವೇ ಹೋರಾಟ ಮಾಡುವಂಥ ಸಂದರ್ಭ ಬರಬಹುದು. ಆದ್ದರಿಂದ, ಕೊಡುತ್ತೇವೆ ಅಥವಾ ಕೊಡುವುದಿಲ್ಲ ವೆಂದು ಉತ್ತರ ಹೇಳುವುದು ಬೇಡ. ನಂತರ ನೀವು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸರ್ಕಾರದ ಪರವಾಗಿ ಒಂದು ಜವಾಬ್ದಾರಿಯುತವಾದ ಉತ್ತರವನ್ನು ಕೊಡಿ.

**ಶ್ರೀ ಪಿ.ಜಿ.ಆರ್. ಸಿಂಧ್ಯ:-** ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಸಭೆಗಳನ್ನು ಮಾಡುವುದಕ್ಕೆ ಕಬ್ಬನ್‌ಪಾರ್ಕ್‌ನಲ್ಲಿ ಮತ್ತು ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಜಾಗ ಕಡಿಮೆಯಾಗಿರುವುದರಿಂದ ಎಲ್ಲಿ ಜಾಗವನ್ನು ಒದಗಿಸಬೇಕೆಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ಗಂಭೀರವಾಗಿ ಪರಿಶೀಲನೆ ಮಾಡಲಾಗುತ್ತಿದೆ. ಕಬ್ಬನ್‌ಪಾರ್ಕ್ ರಕ್ಷಣೆ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಲೇಬೇಕಾಗಿದೆ. ರ್‍ಯಾಲಿಗಳನ್ನು ಮತ್ತು ಪ್ರತಿಭಟನಾ ಮೆರವಣಿಗೆ ಮಾಡುವವರಿಗೆ ಜಾಗ ಕಲ್ಪಿಸಿಕೊಡಬೇಕೆಂಬ ಸಲಹೆಯನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಈ ಸಲಹೆಯನ್ನು ಸರ್ಕಾರ ಒಪ್ಪುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

**ವಿಷಯ:- ಗೋಕಾಕ್ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡುವ ಕುರಿತು.**

291 (2106) **ಶ್ರೀ. ಚಂದ್ರಶೇಖರ್ ನಾಯಕ್ (ಗೋಕಾಕ್):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಗೋಕಾಕ್ ನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಸ್ಥಾನಮಾನ ನೀಡುವ ಬಗ್ಗೆ ಸರ್ಕಾರದವರ ಪರಿಶೀಲನೆಯಲ್ಲಿಯೇ?

ಆ) ಹಾಗಿದ್ದಲ್ಲಿ, ಅದು ಯಾವ ವರ್ಷದಿಂದ ಜಾರಿಗೆ ಬರುವುದು?

ಇ) ಜಿಲ್ಲಾ ಸ್ಥಾನಮಾನ ನೀಡುವ ಬಗ್ಗೆ ಯೋಜನೆಯ ರೂಪರೇಷೆಗಳೇನು?

**ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-**

ಅ) ಜಿಲ್ಲಾ ಪುನರ್–ವಿಂಗಡಣಾ ವರದಿಗಳು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಜಿಲ್ಲೆಗಳ ಪುನರ್–ವಿಂಗಡಣೆ ಸಮಯದಲ್ಲಿ ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗುವುದು.

1. ಚಾರಿತ್ರಿಕ ಹಿನ್ನೆಲೆ,
2. ಜನಸಂಖ್ಯೆ,
3. ವಿಸ್ತೀರ್ಣ,
4. ಪ್ರಾದೇಶಿಕ ಹಿಂದುಳಿದಿರುವಿಕೆ,
5. ಭೌಗೋಳಿಕ ಮತ್ತು ಸಂಪರ್ಕ,
6. ಸಾಗುವಳಿ ಪ್ರದೇಶದ ವಿಸ್ತೀರ್ಣ,